ವಿಶಾಖ ಎನ್.




# ಅಳುಕಿನಲ್ಲೂ ಒಳಿತಿನ ಧ್ಯಾನ

'ಜಾಹ್ನವಿ ಕಪೂರ್‌ಗೆ ಅಭದ್ರತೆ ಕಾಡುತ್ತಿರುತ್ತದೆ. ಮುಂದೇನು ಎನ್ನುವ ಅನಿಶ್ಚಿತತೆ ಒಂದು ಕಡೆ, ತನ್ನಿಂದ ಅಂತಹ ಪಾತ್ರ ನಿರ್ವಹಿಸಲಾದೀತೆ ಎನ್ನುವ ಪ್ರಶ್ನೆ ಇನ್ನೊಂದು ಕಡೆ. ಇವೆಲ್ಲವೂ ಇರುವುದರಿಂದಲೇ ಆಕೆ ಒಳ್ಳೆಯ ನಟಿ ಆಗಬಲ್ಲಳು' ಎಂದು ಅವರ ಸಹೋದರ ಅರ್ಜುನ್ ಕಪೂರ್ ಹೇಳಿದ್ದಾರೆ.

ಸಿನಿಮಾದಲ್ಲಿ ಅಭಿನಯಿಸದೇ ಇರುವಾಗಲೂ ಜಾಹ್ನವಿ ಸುದ್ದಿಗೆ ಪಕ್ಕಾಗುವವರು. 'ಪೇಜ್ 3' ವಸ್ತುವಾಗುವಂತಹ ಕದಲಿಕೆಗಳು ಅವರ ದೈನಂದಿನ ಚಟುವಟಿಕೆಯಲ್ಲೇ ಎದ್ದುಕಾಣುತ್ತವೆ. ಅವರಿಗೆ ಮುಂಬೈ ಹಾಗೂ ದಕ್ಷಿಣ ಭಾರತದ ಅನೇಕ ನಟಿಯರ ಸ್ನೇಹವೂ ಇದೆ.

'ಅವಳಿಗೆ ತಾನು ಯಾರ ಮಗಳು ಎನ್ನುವುದು ತಲೆಯಲ್ಲಿ ಇರುವುದೇ ಇಲ್ಲ. ಅದರಿಂದಲೇ ಅವಳಿಗೆ ತನ್ನತನದ ಚಿಂತೆ. ಹೀಗೆ ಇರುವವರಿಗೆ ಸಹಜವಾಗಿಯೇ ಆತ್ಮವಿಶ್ವಾಸ ಕಡಿಮೆ ಎಂದು ನಮಗೆ ಅನಿಸುತ್ತದೆ. ಅವಳಿಗೆ ತಾನು ಯಾವ ಪಾತ್ರಕ್ಕೆ ಹೊಂದಬಲ್ಲೆನೊ ಎನ್ನುವ ವಿಷಯದಲ್ಲೂ ಗೊಂದಲವಿದೆ. ಇವೆಲ್ಲಕ್ಕೂ ಅವಳೇ ಪರಿಹಾರ ಕಂಡುಕೊಳ್ಳುತ್ತಾಳೆ. ಹೀಗಾಗಿಯೇ ನನಗೆ ಹೆಮ್ಮೆ ಎನಿಸುವುದು' ಎಂದು ಅರ್ಜುನ್ ಸಹೋದರಿಯನ್ನು ಹೊಗಳಿದ್ದಾರೆ.

ಅರ್ಜುನ್ ತಂದೆ ಬೋನಿ ಕಪೂರ್. ಜಾಹ್ನವಿ ತಂದೆಯೂ ಅವರೇ. ಆದರೆ, ಇಬ್ಬರ ತಾಯಿಯರು ಬೇರೆ ಬೇರೆ. ತಮ್ಮ ತಾಯಿ ಶ್ರೀದೇವಿ ಒಟ್ಟಿಗೆ ಯಾವ ಹಂತದಲ್ಲಿಯೂ ಹೋಲಿಸಿಕೊಳ್ಳದೆ ಅಭಿನಯಿಸಬೇಕು ಎನ್ನುವುದು ಜಾಹ್ನವಿ ಅವರ ಬಯಕೆ.

'ಬವಾಲ್' ಹಾಗೂ 'ಮಿಸ್ಟರ್ ಅಂಡ್ ಮಿಸಸ್ ಮಾಹಿ' ಹಿಂದಿ ಸಿನಿಮಾಗಳಲ್ಲಿ ಅವರು ಅಭಿನಯಿಸಿದ್ದು, ಪ್ರತಿದಿನವನ್ನೂ ಹೊಸತೇ ಆಗಿ ನೋಡಬೇಕು ಎನ್ನುವ ತತ್ತ್ವವ ಕಣ್ಣಿಗೊತ್ತಿಕೊಂಡಿದ್ದಾರೆ.

# ಸೇತುಪತಿ ಮತ್ತು 'ಐಡೆಂಟಿಟಿ ಕ್ರೈಸಿಸ್'

ಹಿಂದಿ ಸಿನಿಮಾ ಪ್ರೇಕ್ಷಕರ ಪಾಲಿಗೆ ತಾವಿನ್ನೂ ಹೆಚ್ಚು ಗುರುತಾಗದ ನಟ ಎಂದೇ ವಿಜಯ್ ಸೇತುಪತಿ ಭಾವಿಸಿದ್ದಾರೆ. ಇದಕ್ಕೆ ಅವರು ತಮ್ಮದೇ ಅನುಭವದ ಕಾರಣಗಳನ್ನು ಕೊಡುತ್ತಾರೆ.

'ನಾನು ಯಾರಿಗಾದರೂ ಹಿಂದಿ ಸಿನಿಮಾದಲ್ಲಿ ನಟಿಸುತ್ತಿದ್ದೇನೆ ಎಂದು ಹೇಳಿದರೆ, ಎಂತಹ ಉದ್ಗಾರವೂ ಬರುವುದಿಲ್ಲ. ಅದೇ ಶಾರುಖ್ ಸರ್ ಜತೆ ನಟಿಸುತ್ತಿದ್ದೇನೆ, ಶಾಹಿದ್ ಜತೆ ಆ್ಯಕ್ಟ್ ಮಾಡುತ್ತಿದ್ದೇನೆ, ಕತ್ರಿನಾ ಸಿನಿಮಾದಲ್ಲಿ ನಾನು ಇದ್ದೇನೆ ಎಂದೆಲ್ಲ ಹೇಳಿದರೆ, 'ಓಹೋ, ವಾವ್' ಎಂದೆಲ್ಲ ಪ್ರತಿಕ್ರಿಯಿಸುತ್ತಾರೆ. ಇದನ್ನು ಪದೇಪದೇ ಅನುಭವಿಸಿದ್ದೇನೆ. ಹಿಂದಿ ಪ್ರೇಕ್ಷಕರಿಗೆ ನಾನಿನ್ನೂ ಅಷ್ಟಾಗಿ ಗುರುತಾಗದ ನಟ' ಎಂದು ವಿಜಯ್ ಸೇತುಪತಿ ಹೇಳಿದರು.

'ಫರ್ಜಿ' ಎಂಬ ಎಂಟು ಎಪಿಸೋಡ್‌ಗಳ ವೆಬ್ ಸರಣಿಯಲ್ಲಿ ವಿಜಯ್ ಅಭಿನಯಿಸಿದ್ದಾರೆ. ಶಾಹಿದ್ ಕಪೂರ್ ಕೂಡ ಅದರಲ್ಲಿ ಇದ್ದಾರೆ. ಪೊಲೀಸ್ ಅಧಿಕಾರಿಯ ಆ ಪಾತ್ರದಿಂದ ಹಿಂದಿ ಪ್ರೇಕ್ಷಕರಿಗೆ ಅವರು ಇಷ್ಟವಾಗಲಿದ್ದಾರೆ ಎನ್ನುವ ನಂಬಿಕೆ ನಿರ್ದೇಶಕರಾದ ರಾಜ್ ನಿಡಿಮೋರು ಹಾಗೂ ಕೃಷ್ಣ ಡಿ.ಕೆ. ಅವರದ್ದು. 'ಫ್ಯಾಮಿಲಿ ಮ್ಯಾನ್' ನಿರ್ದೇಶಿಸಿ, ಯಶಸ್ಸನ್ನು ಬೆನ್ನಿಗಿಟ್ಟುಕೊಂಡ ನಿರ್ದೇಶಕದ್ವಯರು ಇವರು.

ಶಾರುಖ್ ಅಭಿನಯದ 'ಜವಾನ್' ಹಿಂದಿ ಸಿನಿಮಾದಲ್ಲೂ ಸೇತುಪತಿ ಒಂದು ಪಾತ್ರ ಮಾಡುತ್ತಿದ್ದಾರೆ. ತಮಿಳಿನ ಅಟ್ಲಿ ಅದರ ನಿರ್ದೇಶಕ. '96', 'ವಿಕ್ರಮ್' ತಮಿಳು ಸಿನಿಮಾ ಅಭಿನಯದಿಂದ ದೇಶದ ಹಲವು ಭಾಷಿಗರ ಮನಗೆದ್ದಿರುವ ವಿಜಯ್ ಸೇತುಪತಿ, 12 ವರ್ಷಗಳಿಂದ ಸಿನಿಮಾ ತೆರೆಮೇಲೆ ರಂಜಿಸಿದ್ದಾರೆ. 55ಕ್ಕೂ ಹೆಚ್ಚು ಸಿನಿಮಾಗಳ ಹಲವು ಬಗೆಯ ಪಾತ್ರಗಳನ್ನು ನಿರ್ವಹಿಸಿರುವ ಅವರಿಗೆ ಹಿಂದಿ ಭಾಷೆಯಲ್ಲಿ ಕೂಡ ಮೋಡಿ ಮಾಡುವ ಉತ್ಸಾಹ.

